‘‘ಇನ್ನು ತಿರಗಾದು ಸಾಕು ಅನಸಾಕತ್ಯಾದ. ವಾಪಸ್ ವಿರುಪಾಪುರ ಗಡ್ಡಿಗೆ ಹೋಗ್ಬುಡ್ತೀನಿ.’’

‘‘ಹೋಗಿ ಏನ್ಮಾಡ್ತೀರಿ? ಹೆಂಡ್ತಿಗೂಡ ಇಲ್ಲ ಈಗ’’ ಆ ಪ್ರಶ್ನೆ ಕೇಳಿದಮ್ಯಾಗ ಕೇಳಬಾಡದಾಗಿತ್ತು ಅನ್ನಿಸ್ತು ಆಕೆಗೆ.

ಆದ್ರೆ ಆ ಪ್ರಶ್ನೆಯಿಂದ ಆತನಿಗೆ ಕೆಟ್ಟ್ ಅನ್ನಿಸದಂಗೇನೂ ಕಾಣ್ಲಿಲ್ಲ.

‘‘ಸುಮ್ನೆ ಕುಂತು ಕಾಲ ಕಳೀತೀನಿ. ಸಾಯಂಕಾಲ ಫಾರಿನ್ ಟೂರಿಸ್ಟುಗಳ್ ಜತೆ ಸನ್‌ಸೆಟ್ ಪಾಯಿಂಟಿಗೆ ಹೋಗ್ತಿನಿ. ಅವ್ರ ಜತೆ ಹಾಡ್ ಹೇಳ್ತೀನಿ. ಇಲ್ಲಂದ್ರೆ ರಾತ್ರಿ ಹೊತ್ತಿನಾಗ ನದಿ ಕಡೆ ಹೋಗ್ತೀನಿ. ಕತ್ತಲಾದ ಮ್ಯಾಗ ಒಬ್ಬನೇ ದೋಣ್ಯಾಗ ತಿರಗಾದು ಒಂದ್ನಮೂನಿ ಸುಖ ಕೊಡ್ತಾದ. ಈಗ ಮಳೆಗಾಲ ಬ್ಯಾರೆ ಶುರುವಾಗ್ತದ. ಡ್ಯಾಮಿನ್ಯಾಗ ನೀರು ಬಿಡ್ತಾರ. ಮತ್ತೆ ಹೊಳೆ ಬರ್ತಾದ. ಇರುಪಾಪುರ ಗಡ್ಡಿ ಅನ್ನಾದು ನಡುಗಡ್ಡಿ ಆಗ್ತದ. ಆಕಡೆವು ಆಕಡೆ... ಈಕಡೆವು ಈಕಡೆ ಅನ್ನಂಗಾಗ್ತದ. ಒಂದೆ ಮಾತಿನ್ಯಾಗ ಹೇಳ್ಬೇಕು ಅಂದ್ರ ಈ ಪ್ರಪಂಚದ ಜತೆ ಕನೆಕ್ಷನ್ ಕಟ್ ಆಗ್ತದ. ಅಂಥ ಸಂದರ್ಭದಾಗ ನಾನು ಇರಾಕ ಇಷ್ಟಾ ಪಡ್ತೀನಿ.’’

ಆತ ಆ ಮಾತು ಹೇಳಾಕಲ್ಕ ಪದ್ಮ ತನ್ ಕುಬುಸ ಬಿಚ್ಚಿಹಾಕಿ, ಆತನ ಎದೆ ಮ್ಯಾಲ ನಿಧಾನಕ್ಕ ಆನಿಕೆಂಡ್ಲು. ಆಕೆ ಬೆತ್ತಲೆ ಬೆನ್ನನ್ನ ಆತನ ಕೈಬೊಳ್ಳು ಮೆಲ್ಲಕ ಸವರಾಕತ್ತಿದ್ವು. ಗಂಡಸರ ಕೈಗಳು ಆಕೀಗೆ ಗೊತ್ತು. ಆತನ ಕೈ ಗಂಡಸಿನ ಕೈಯಂಗ ಅನಸಲಿಲ್ಲ. ಸಮುದ್ರದಾಗ ದಂಡಿಗೆ ಹೊಡ್ದು ಮತ್ತೆ ಹಿಂದಕ ಸರದುಹೋಗೋ ಅಲೆಗಳಂಗ ಆತನ ಬೊಳ್ಳುಗಳು ಆಕೆ ಬೆನ್ನಿನ ಮ್ಯಾಗ ಕುಣ್ಯಾಕತ್ತಿದ್ವು. ಆತನ ಕೈಗಳ ಡೊಳ್ಳುಕುಣಿತಕ್ಕೆ ಆಕೆ ಬೆನ್ನೆಲ್ಲಾ ಕರಗಿದಂಗಾಗಿ... ನೀರು ನೀರಾಗಿ... ಹಳ್ಳವಾಗಿ... ಕೊಳ್ಳವಾಗಿ... ನದಿಯಾಂತಾಗಿ... ಪ್ರವಾಹ ಬಂದಂತಾಗಿ... ತನ್ನೊಳಗಿನ ನದಿಯಾಗ ತಾನೇ ಹೊಡಕೊಂಡು ಹೋಗಾಕತ್ಯಾಳೇನೋ ಅನ್ನಿಸಿದಂತಾಗಿ...

